ದಿನಾಂಕಃ **18.03.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

14. ದಿನಾಂಕ 17.11.2022 ರಂದು ಪ್ರಾಸಾ.1 ರವರ ಮುಂದುವರೆದ ಹೇಳಿಕೆಯನ್ನು ಮತ್ತು ಸಾಕ್ಷಿದಾರರಾದ ಚಾಸಾ.14, ಚಾಸಾ.15,ಚಾಸಾ.16 ಮತ್ತು ಪ್ರಾಸಾ.3 ರವರ

ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಪ್ರಾಸಾ.3 ರವರು ನಿಪಿ.21 ರಂತೆ ಹೇಳಿಕೆಯನ್ನು ನೀಡಿರುತ್ತಾರೆ. ದಿನಾಂಕ 18.11.2022 ರಂದು ಚಾಸಾ.21 ರವರಿಗೆ ಆರೋಪಿಯ ವಾಸದ ಮನೆಯ ದಾಖಲೆಯನ್ನು ನೀಡುವಂತೆ ಕೋರಿರುತ್ತೇನೆ. ಸದರಿ ಮನವಿಯನ್ನು ನೋಡುತ್ತಿದ್ದು ನಿಪಿ.32 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.32(ಎ) ಎಂದು ಗುರುತಿಸಲಾಯಿತು.

15. ಅದೇ ದಿನ ಪ್ರಾಸಾ.5 ರವರಿಗೆ ಕೃತ್ಯ ನಡೆದ ಮನೆಯ ವಿದ್ಯುತ್ ಬಳಕೆದಾರರ ಬಗ್ಗೆ ಮಾಹಿತಿ ನೀಡಲು ಕೋರಿ ನಿಪಿ.23 ರಂತೆ ಮನವಿಯನ್ನು ಸಲ್ಲಿಸಿರುತ್ತೇನೆ. ನಿಪಿ.23 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.23(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಕೊಪ್ಪ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮನವಿಯನ್ನು ಸಲ್ಲಿಸಿ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಡುವಂತೆ ಕೋರಿರುತ್ತೇನೆ. ಅದೇ ದಿನ ಚಾಸಾ.17 ಮತ್ತು ಚಾಸಾ.18 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

16. ದಿನಾಂಕ 29.11.2022 ರಂದು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಚಾಸಾ.31 ರವರಿಂದ ಮೃತನ ಮರಣೋತ್ತರ ಪರೀಕ್ಷಾ ವರದಿ ಮತ್ತು ಸದರಿಯವರು ಮರಣೋತ್ತರ ಪರೀಕ್ಷಾ ಸಮಯದಲ್ಲಿ ಸಂಗ್ರಹಿಸಿದ್ದ ಮೃತಳ ಬಟ್ಟೆಗಳು, viscera ಮತ್ತು ಮಾದರಿಗಳನ್ನು ಸೀಲಾದ ಸ್ಥಿತಿಯಲ್ಲಿ ಚಾಸಾ.24 ರವರು ತಂದು ಹಾಜರುಪಡಿಸಿದ ಮೇರೆಗೆ

ಚಾಸಾ.6 ಮತ್ತು ಚಾಸಾ.7 ರವರಿಗೆ ನೋಟೀಸನ್ನು ಜಾರಿ ಮಾಡಿ ಬರಮಾಡಿಕೊಂಡು ಅವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಸದರಿ ಬಟ್ಟೆ ಮತ್ತು ವಸ್ತುಗಳನ್ನು ಅಮಾನತುಪಡಿಸಿಕೊಂಡು ಅವುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 70/2022 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ನೋಟೀಸು, ಪಂಚನಾಮೆ ಮತ್ತು ಮಾಲು ಪಟ್ಟಿಯನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ.33 ರಿಂದ ನಿಪಿ.35 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.33(ಎ) ರಿಂದ ನಿಪಿ.35(ಎ) ಎಂದು ಗುರುತಿಸಲಾಯಿತು.

17. ಸದರಿ ಪಂಚನಾಮೆಯ ಕಾಲಕ್ಕೆ ಫೋಟೋಗಳನ್ನು ತೆಗೆಸಿರುತ್ತೇನೆ. ಸದರಿ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ.36 ಮತ್ತು ನಿಪಿ.37 ಎಂದು ಗುರುತಿಸಲಾಯಿತು. ಮೃತಳ ಮರಣೋತ್ತರ ಪರೀಕ್ಷಾ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.38 ಎಂದು, ಅದರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.38(ಎ) ಎಂದು ಗುರುತಿಸಲಾಯಿತು.

18. ಪ್ರಕರಣದಲ್ಲಿ ಅಮಾನತುಪಡಿಸಿಕೊಂಡಿದ್ದ ನಿಪಿ.31 ಮತ್ತು ನಿಪಿ.35 ಮಾಲುಪಟ್ಟಿಗಳಲ್ಲಿ ಅಳವಡಿಸಿಕೊಂಡಿದ್ದ ಮುದ್ದೆ ಮಾಲುಗಳನ್ನು ಪರೀಕ್ಷೆಗಾಗಿ ಮಂಗಳೂರಿನ ಆರ್.ಎಫ್.ಎಸ್.ಎಲ್ ಗೆ ಮತ್ತು ಬೆಂಗಳೂರಿನ ಎಸ್.ಎಫ್.ಎಸ್.ಎಲ್ ಗೆ ದಿನಾಂಕ 30.11.2022 ರಂದು ಸಿಬ್ಬಂದಿಗಳಾದ ಚಾಸಾ.25 ಮತ್ತು ಚಾಸಾ.26 ರವರ ಮೂಲಕ

ಕಳುಹಿಸಿಕೊಟ್ಟು ಸ್ವೀಕೃತಿಗಳನ್ನು ಪಡೆದುಕೊಂಡಿರುತ್ತೇನೆ ಮತ್ತು ಸದರಿ ಸಿಬ್ಬಂದಿಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

19. ದಿನಾಂಕ 02.12.2022 ರಂದು ಚಾಸಾ.20 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಹಾಗೂ ಆರೋಪಿ ಮತ್ತು ಮೃತ ಯಶೋಧಾ ಸದರಿಯವರ ಎಸ್ಟೇಟಿನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ದಿನಾಂಕ 15.11.2022 ರಿಂದ ಕೆಲಸಕ್ಕೆ ಗೈರು ಹಾಜರಾದ ಬಗ್ಗೆ ಹಾಜರಾತಿ ಪುಸ್ತಕದ ದೃಢೀಕೃತ ಪ್ರತಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ದೃಢೀಕೃತ ಪ್ರತಿಯನ್ನು ನೋಡುತ್ತಿದ್ದು ನಿಪಿ.39 ಎಂದು, ಅದರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.39(ಎ) ಎಂದು ಗುರುತಿಸಲಾಯಿತು.

20. ದಿನಾಂಕ 07.12.2022 ರಂದು ಮಂಗಳೂರು ಆರ್.ಎಫ್.ಎಸ್.ಎಲ್ ನಿಂದ ಎರಡು ಪರೀಕ್ಷಾ ವರದಿಗಳನ್ನು ಎಫ್.ಎಲ್.ಎಂ.ಎಸ್ ತಂತ್ರಾಂಶದ ಮೂಲಕ ಪಡೆದುಕೊಂಡಿರುತ್ತೇನೆ. ಸದರಿ ವರದಿಗಳನ್ನು ನೋಡುತ್ತಿದ್ದು ಅವುಗಳ ಪೈಕಿ ಒಂದು ವರದಿಯನ್ನು ಈಗಾಗಲೇ ನಿಪಿ.27 ಎಂದು ಗುರುತಿಸಲಾಗಿರುತ್ತದೆ. ಮತ್ತೊಂದು ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.40 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.40(ಎ) ಎಂದು ಗುರುತಿಸಲಾಯಿತು.

21. ದಿನಾಂಕ 09.12.2022 ರಂದು ಬೆಂಗಳೂರಿನ ಎಸ್.ಎಫ್.ಎಸ್.ಎಲ್ ನಿಂದ ಪರೀಕ್ಷಾ ವರದಿಯನ್ನು ಎಫ್.ಎಲ್.ಎಂ.ಎಸ್ ತಂತ್ರಾಂಶದ ಮೂಲಕ ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು

ಅದನ್ನು ಈಗಾಗಲೇ ನಿಪಿ.28 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.28(ಎ) ಎಂದು ಗುರುತಿಸಲಾಯಿತು.

22. ದಿನಾಂಕ 12.01.2023 ರಂದು ಚಾಸಾ.31 ರವರಿಗೆ ಮೇಲೆ ಹೇಳಿದಂತೆ ದಿನಾಂಕ 07.12.2022 ಮತ್ತು 09.12.2022 ರಂದು ಎಫ್ ಎಸ್ ಎಲ್ ನಿಂದ ಪಡೆದುಕೊಂಡಿದ್ದ ವರದಿಗಳು ಮತ್ತು ಕೃತ್ಯಕ್ಕೆ ಬಳಸಲಾಗಿದ್ದ ಒಂದು ಮರದ ಕೋಲನ್ನು ಮನವಿಯೊಂದಿಗೆ ಸಲ್ಲಿಸಿಕೊಂಡು ಅವುಗಳನ್ನು ಪರೀಕ್ಷಿಸಿ ಮೃತಳ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯವನ್ನು ತಿಳಿಸಲು ಮತ್ತು ಸದರಿ ಕೋಲಿನಿಂದ ಹಲ್ಲೆ ಮಾಡಿದರೆ ಮರಣೋತ್ತರ ಪರೀಕ್ಷಾ ವರದಿಯಲ್ಲಿ ನಮೂದಿಸಿರುವ ಗಾಯಗಳಾಗುವ ಸಾಧ್ಯತೆಯ ಬಗ್ಗೆ ತಿಳಿಸುವಂತೆ ಕೋರಿರುತ್ತೇನೆ. ಸದರಿ ಮನವಿಯನ್ನು ನೋಡುತ್ತಿದ್ದು ಅದನ್ನು ನಿಪಿ.41 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.41(ಎ) ಎಂದು ಗುರುತಿಸಲಾಯಿತು.

23. ದಿನಾಂಕ 16.01.2023 ರಂದು ಚಾಸಾ.21 ರವರಿಂದ ಕೃತ್ಯ ನಡೆದ ಆರೋಪಿಯ ಮನೆಯ ಬಗ್ಗೆ ದೃಢೀಕರಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಅದರ ಪ್ರಕಾರ ಆರೋಪಿ ಹೊನ್ನಗುಂಡಿಯಲ್ಲಿ ವಾಸವಿದ್ದ ಮನೆ ಗೋಪಾಲ ಬಿನ್ ಕುಪ್ಪ ಪೂಜಾರಿರವರ ಹೆಸರಿನಲ್ಲಿ ದಾಖಲಾಗಿರುವುದಾಗಿ ಮತ್ತು ಆರೋಪಿ ಸದಾನಂದ ರವರ ಹೆಸರಿನಲ್ಲಿ ಖಾತೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಸದರಿ ವರದಿಯನ್ನು

ನೋಡುತ್ತಿದ್ದು ಅದನ್ನು ನಿಪಿ.42 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.42(ಎ) ಎಂದು ಗುರುತಿಸಲಾಯಿತು.

24. ದಿನಾಂಕ 28.01.2023 ರಂದು ಚಾಸಾ.33 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 31.01.2023 ರಂದು ಚಾಸಾ.31 ರವರಿಂದ ಮೃತಳ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯವನ್ನು ಪಡೆದುಕೊಂಡಿರುತ್ತೇನೆ. ಸದರಿ ಅಭಿಪ್ರಾಯ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.43 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.43(ಎ) ಎಂದು ಗುರುತಿಸಲಾಯಿತು.

25. ದಿನಾಂಕ 01.02.2023 ರಂದು ಸಾಕ್ಷಿದಾರರಾದ ಚಾಸಾ.8, ಪ್ರಾಸಾ.4, ಚಾಸಾ.10, ಚಾಸಾ.11, ಚಾಸಾ.12 ರವರ ಮುಂದುವರೆದ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 11.02.2023 ರಂದು ಚಾಸಾ.23 ರವರಿಂದ ಪ್ರಾಸಾ.3 ರವರ ವ್ಯಾಸಂಗ ದೃಢೀಕರಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಸದರಿ ದೃಢೀಕರಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ.44 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.44(ಎ) ಎಂದು ಗುರುತಿಸಲಾಯಿತು.

26. ದಿನಾಂಕ 10.02.2023 ರಂದು ಪ್ರಾಸಾ.5 ರವರಿಗೆ ನಿಪಿ.25 ರಂತೆ ಮನವಿಯನ್ನು ಸಲ್ಲಿಸಿ ದಿನಾಂಕ 15.11.2022 ರಂದು ರಾತ್ರಿ 7.00 ಗಂಟೆಯಿಂದ ಬೆಳಿಗ್ಗೆ 6.00 ಗಂಟೆಯವರೆಗೆ ಹೊನ್ನಗುಂಡಿಯಲ್ಲಿರುವ ಆರೋಪಿಯ ಮನೆಗೆ ವಿದ್ಯುತ್ ಸರಬರಾಜು ಆಗುತ್ತಿತ್ತೇ ಎಂದು

ಮಾಹಿತಿಯನ್ನು ನೀಡಲು ಕೋರಿರುತ್ತೇನೆ. ಅದರಂತೆ ಪ್ರಾಸಾ.5 ರವರು ದಿನಾಂಕ 11.02.2023 ರಂದು ಮೇಲೆ ಹೇಳಲಾದ ಅವಧಿಯಲ್ಲಿ ವಿದ್ಯುತ್ ಸಂಪರ್ಕವಿತ್ತು ಎಂದು ತಿಳಿಸಿ ನಿಪಿ.26 ರಂತೆ ವರದಿಯನ್ನು ಸಲ್ಲಿಸಿರುತ್ತಾರೆ ಮತ್ತು ದಿನಾಂಕ 04.11.2022 ರ ವಿದ್ಯುತ್ ಬಿಲ್ಲನ್ನು ನೀಡಿರುತ್ತಾರೆ. ಸದರಿ ಬಿಲ್ಲನ್ನು ನೋಡುತ್ತಿದ್ದು ಅದನ್ನು ನಿಪಿ.45 ಎಂದು, ಅದರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.45(ಎ) ಎಂದು ಗುರುತಿಸಲಾಯಿತು. ನಿಪಿ.25 ಮತ್ತು ನಿಪಿ.26 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.25(ಬಿ) ಮತ್ತು ನಿಪಿ.26(ಬಿ) ಎಂದು ಗುರುತಿಸಲಾಯಿತು.

27. ದಿನಾಂಕ 13.02.2023 ರಂದು ಪ್ರಾಸಾ.3 ರವರನ್ನು ಕೊಪ್ಪ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶರ ಬಳಿ ಹಾಜರುಪಡಿಸಿ ಅವರಿಂದ ಆತನ ಹೇಳಿಕೆಯನ್ನು ಸಿ ಆರ್ ಪಿ ಸಿ ಕಲಂ 164 ರಡಿಯಲ್ಲಿ ದಾಖಲು ಮಾಡಿಕೊಂಡಿರುತ್ತೇನೆ. ಸದರಿ ಹೇಳಿಕೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.22 ಎಂದು ಗುರುತಿಸಲಾಗಿರುತ್ತದೆ.

28. ತನಿಖಾ ಕಾಲದಲ್ಲಿ ಚಾಸಾ.36 ರವರು ನನ್ನ ಸೂಚನೆಯ ಮೇರೆಗೆ ನನ್ನ ಮೊಬೈಲ್ ನಿಂದ ಫೋಟೋಗಳನ್ನು ತೆಗೆದಿದ್ದು ಮತ್ತು ತಮ್ಮ ಮೊಬೈಲ್ ನಿಂದ ಪ್ರಾಸಾ.3 ರವರ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವ ಸಮಯದಲ್ಲಿ ವೀಡಿಯೋ ಮಾಡಿದ್ದು, ನಂತರ ಅವುಗಳನ್ನು ನನ್ನ ಸೂಚನೆಯ ಮೇರೆಗೆ ದಿನಾಂಕ 13.02.2023 ರಂದು ಎರಡು ಪ್ರತ್ಯೇಕ ಸಿಡಿಗಳಿಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿಕೊಟ್ಟು ಆ ಬಗ್ಗೆ ಭಾರತೀಯ

ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಡಿಯಲ್ಲಿ ದೃಢೀಕರಣ ಪತ್ರವನ್ನು ನೀಡಿರುತ್ತಾರೆ. ತನಿಖಾ ಕಾಲದಲ್ಲಿ ತೆಗೆದ ಫೋಟೋಗಳನ್ನೊಳಗೊಂಡ ಸಿಡಿಯನ್ನು ನೋಡುತ್ತಿದ್ದು ಅದನ್ನು ನಿಪಿ.46 ಎಂದು, ಪ್ರಾಸಾ.3 ರವರ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವ ಸಮಯದಲ್ಲಿ ಮಾಡಿಕೊಳ್ಳಲಾಗಿದೆ ಎಂದು ಹೇಳಲಾದ ವೀಡಿಯೋ ಇರುವ ಸಿಡಿಯನ್ನು ನಿಪಿ.47 ಎಂದು ಮತ್ತು ದೃಢೀಕರಣ ಪತ್ರವನ್ನು ನಿಪಿ.48 ಎಂದು ಗುರುತಿಸಲಾಯಿತು. ನಿಪಿ.48 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.48(ಎ) ಎಂದು ಗುರುತಿಸಲಾಯಿತು.

29. ಅಲ್ಲಿಯವರೆಗೆ ಆಗಿದ್ದ ತನಿಖೆಯಲ್ಲಿ ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷಾಧಾರಗಳು ಕಂಡು ಬಂದಿದ್ದರಿಂದ ಬೆಂಗಳೂರು ಎಸ್ ಎಫ್ ಎಸ್ ಎಲ್ ನಿಂದ ಮೃತಳ ಉಗುರಿನ ತುಣುಕುಗಳ ಪರೀಕ್ಷಾ ವರದಿ, ಕೃತ್ಯಕ್ಕೆ ಬಳಸಲಾದ ಕೋಲಿನ ಬಗ್ಗೆ ವೈದ್ಯರ ವರದಿಯನ್ನು, ಕೃತ್ಯ ನಡೆದ ಸ್ಥಳದ ನಕ್ಷೆಯನ್ನು, ಮೊಬೈಲ್ ನಂಬರ್ ಗಳ ಸಿಡಿಆರ್, ಸಿ ಎ ಎಫ್ ದಾಖಲೆಗಳನ್ನು ಪಡೆಯುವುದನ್ನು ಬಾಕಿ ಇರಿಸಿ ದಿನಾಂಕ 14.02.2023 ರಂದು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

30. ದಿನಾಂಕ 29.03.2023 ರಂದು ಬೆಂಗಳೂರಿನ ಎಸ್ ಎಫ್ ಎಸ್ ಎಲ್ ನಿಂದ ಪರೀಕ್ಷಾ ವರದಿಯನ್ನು ಎಫ್.ಎಲ್.ಎಂ.ಎಸ್ ತಂತ್ರಾಂಶದ ಮೂಲಕ ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು

ಅದನ್ನು ನಿಪಿ.49 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.49(ಎ) ಎಂದು ಗುರುತಿಸಲಾಯಿತು.

31. ಮೇಲೆ ಹೇಳಿದಂತೆ ನಾನು ಎಫ್ ಎಸ್ ಎಲ್ ವರದಿಗಳನ್ನು ಎಫ್.ಎಲ್.ಎಂ.ಎಸ್ ತಂತ್ರಾಂಶದ ಮೂಲಕ ಡೌನ್ ಲೋಡ್ ಮಾಡಿಕೊಂಡು ಹಾಜರುಪಡಿಸಿದ್ದ ಬಗ್ಗೆ ದಿನಾಂಕ 20.02.2024 ರಂದು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಡಿಯಲ್ಲಿ ದೃಢೀಕರಣ ಪತ್ರವನ್ನು ತಯಾರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದೃಢೀಕರಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ.50 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.50(ಎ) ಎಂದು ಗುರುತಿಸಲಾಯಿತು. ನಂತರ ದಿನಾಂಕ 21.02.2024 ರಂದು ನಿಪಿ.49 ಮತ್ತು ನಿಪಿ.50 ದಾಖಲೆಗಳನ್ನು ನ್ಯಾಯಾಲಯಕ್ಕೆ ಮನವಿಯೊಂದಿಗೆ ಸಲ್ಲಿಸಿಕೊಂಡಿರುತ್ತೇನೆ.

32. ದಿನಾಂಕ 25.04.2023 ರಂದು ಚಾಸಾ.31 ರವರಿಂದ ಕೃತ್ಯಕ್ಕೆ ಬಳಸಲಾದ ಕೋಲನ್ನು ಪರೀಕ್ಷಿಸಿ ನೀಡಿದ ವರದಿಯನ್ನು ಪಡೆದುಕೊಂಡು ಅದನ್ನು ದಿನಾಂಕ 05.07.2023 ರಂದು ನ್ಯಾಯಾಲಯಕ್ಕೆ ಮನವಿಯೊಂದಿಗೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಅಭಿಪ್ರಾಯ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.51 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.51(ಎ) ಎಂದು ಗುರುತಿಸಲಾಯಿತು.

33. ದಿನಾಂಕ 30.11.2022 ರಂದು ಫ್ರಾಸಾ.5 ರವರಿಂದ ಕೃತ್ಯ ನಡೆದ ಮನೆಗೆ ಆರೋಪಿಯ ತಾಯಿಯಾದ ಜಾನಕಿ ಕೋಂ ಗುರುವ, ಸೋಮೇಶ್ವರ ಖಾನ್ ಎಸ್ಟೇಟ್ ರವರ

ಹೆಸರಿನಲ್ಲಿ ಮೆಸ್ಕಾಂ ಇಲಾಖೆಯಿಂದ ಮೀಟರ್ ಬೋರ್ಡ್‌ನ್ನು ಅಳವಡಿಸಿದ್ದಾಗಿ ವರದಿಯನ್ನು ಪಡೆದುಕೊಡಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.24 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.24(ಬಿ) ಎಂದು ಗುರುತಿಸಲಾಯಿತು.

34. ಚಾಸಾ.19 ಗೋಪಾಲ್ ರವರು ತಮ್ಮ ಹೇಳಿಕೆಯಲ್ಲಿ ಆರೋಪಿ ಹೊನ್ನಗುಂಡಿ ಗ್ರಾಮದಲ್ಲಿ ವಾಸವಿದ್ದ ಮನೆಯನ್ನು ಆತನ ತಂದೆ ಗುರುವರವರಿಗೆ ಸುಮಾರು 20 ವರ್ಷಗಳ ಹಿಂದೆ ಮಾರಾಟ ಮಾಡಿದ್ದಾಗಿ ಆದರೆ ಅದರ ಮೇರೆಗೆ ಗುರುವರವರ ಹೆಸರಿಗೆ ಖಾತೆ ಬದಲಾವಣೆಯಾಗದಿದ್ದ ಬಗ್ಗೆ ಮತ್ತು ಆ ಸಮಯದಲ್ಲಿ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿಲ್ಲವೆಂದು ನಂತರದಲ್ಲಿ ಆರೋಪಿಯ ತಾಯಿಯ ಹೆಸರಿನಲ್ಲಿ ಸದರಿ ಮನೆಗೆ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುವುದಾಗಿ ತಿಳಿಸಿರುತ್ತಾರೆ.

35. ನಿಪಿ.10 ಪಂಚನಾಮೆಯ ಕಾಲಕ್ಕೆ ಅಮಾನತುಪಡಿಸಿಕೊಂಡ ಕೋಲನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಕೋಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ LADCS ನ Deputy Chief Defense counsel ಆದ ಶ್ರೀ ಎನ್ .ಡಿ .ವಕೀಲರಿಂದಃ ಆರೋಪಿ ಪರವಾಗಿಃ**

36. ದಿ.16.11.2022 ರಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾಗಿ ಹೇಳಿದ್ದೀರಿ ಆ ಸಮಯದಲ್ಲಿ ಮನೆಯ ಅಕ್ಕಪಕ್ಕದವರನ್ನು ವಿಚಾರಿಸಿ ಅವರ ಹೇಳಿಕೆಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎನ್ನುತ್ತಾರೆ. ನಂತರ ಸಾಕ್ಷಿ ಮುಂದುವರೆದು ಹೊನ್ನಗುಂಡಿಯವರಾದ ಚಾಸಾ.11 ಮತ್ತು ಚಾಸಾ.12 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ ಎನ್ನುತ್ತಾರೆ.

37. ಫ್ರಾಸಾ.2 ಮತ್ತು ಚಾಸಾ.3 ನಿಮಗೆ ಹೇಗೆ ಪರಿಚಿತರು ಎಂದರೆ ಸಾಕ್ಷಿ ಅವರು ಸ್ಥಳದಲ್ಲಿ ಹಾಜರಿದ್ದರು ಎನ್ನುತ್ತಾರೆ. ಫ್ರಾಸಾ.2 ಮತ್ತು ಚಾಸಾ.3 ರವರು ಹೊನ್ನಗುಂಡಿ ಗ್ರಾಮದ ವಾಸಿಗಳಲ್ಲ ಎಂದರೆ ಸರಿ. ಫ್ರಾಸಾ.2, ಚಾಸಾ.3 ಮತ್ತು ಫ್ರಾಸಾ.4 ರವರು ಫ್ರಾಸಾ.1 ರವರ ಸಂಬಂಧಿಕರು ಮತ್ತು ಸ್ನೇಹಿತರು ಎಂದರೆ ಸರಿ.

38. ದಿ.16-11-2022 ರಂದು ನೀವು ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳದಲ್ಲಿ ಮೃತಳು ಒದ್ದಾಡಿದ್ದ ಬಗ್ಗೆ ಕುರುಹುಗಳು ಕಂಡು ಬಂದವೇ ಎಂದರೆ ಸಾಕ್ಷಿ ಆಕೆಯ ಮೃತ ದೇಹವಿದ್ದ ಸ್ಥಳದಲ್ಲಿ ಚಾಪೆ ಮತ್ತು ಬೆಡ್ ಶೀಟ್ ಗಳು ಅಸ್ತವ್ಯಸ್ತವಾಗಿದ್ದವು ಎನ್ನುತ್ತಾರೆ. ಆ ಸಮಯದಲ್ಲಿ ನಿಮ್ಮೊಂದಿಗೆ ಎಫ್. ಎಸ್. ಎಲ್ ಮತ್ತು

ಬೆರಳಚ್ಚು ತಜ್ಞರನ್ನು ಕರೆದುಕೊಂಡು ಹೋಗಿ ಪರಿಶೀಲಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿ ಬಸರೀಕಟ್ಟೆ ದೂರದಲ್ಲಿದ್ದ ಕಾರಣ ಎಫ್.ಎಸ್.ಎಲ್. ತಜ್ಞರನ್ನು ಕರೆಸಿಲ್ಲ ಮತ್ತು ಬೆರಳಚ್ಚು ತಜ್ಞರನ್ನು ಕರೆಸುವ ಅವಶ್ಯಕತೆ ಕಂಡು ಬಂದಿಲ್ಲ ಎನ್ನುತ್ತಾರೆ. ಕೃತ್ಯ ನಡೆದ ಸ್ಥಳದಲ್ಲಿ ಸಾಕ್ಷಾಧಾರಗಳನ್ನು ಕಾಪಾಡುವ ಮತ್ತು ಭದ್ರಪಡಿಸುವ ಬಗ್ಗೆ ನಿಮಗೆ ತರಬೇತಿಯಾಗಿರುತ್ತದೆ ಎಂದರೆ ಸರಿ. ಮೃತಳ ಕುತ್ತಿಗೆಯ ಭಾಗದಲ್ಲಿ ಮೇಲ್ನೋಟಕ್ಕೆ ನಿಮಗೆ ಯಾವುದಾದರೂ ಫೈಬರ್ ಗಳು ಕಂಡು ಬಂದವೇ ಎಂದರೆ ಸಾಕ್ಷಿಯು ಅವು ಸೂಕ್ಷ್ಮವಾಗಿರುವುದರಿಂದ ಕಂಡು ಬಂದಿಲ್ಲ ನಂತರ ವೈದ್ಯರು ಸೆಲೋ ಟೇಪಿನಲ್ಲಿ ಅವುಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ ಎನ್ನುತ್ತಾರೆ.

39.ಮೃತಳ ಕುತ್ತಿಗೆಯ ಭಾಗದಲ್ಲಿ ಯಾವುದೇ ಫೈಬರ್ ಗಳು ಕಂಡು ಬರದಿದ್ದರೂ ಸಹ ನೀವು ವೈದ್ಯರ ಮೇಲೆ ಪ್ರಭಾವ ಬೀರಿ ನೀವು ವಶಪಡಿಸಿಕೊಂಡಿದ್ದೀರಿ ಎಂದು ಹೇಳಲಾದ ಬೆಡ್ ಶೀಟಿನ ಫೈಬರ್ ಗಳನ್ನು ಸೆಲೋ ಟೇಪಿನಲ್ಲಿ ಅಂಟಿಸಿ ಅವರಿಂದ ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ. ಮೃತಳ ಕುತ್ತಿಗೆಯ ಮೇಲೆ ಯಾವುದೇ ಬಟ್ಟೆಯ ಫೈಬರ್ ಗಳು ಇರಲಿಲ್ಲ ಎಂದರೆ ಸರಿಯಲ್ಲ.

40. ಶವತನಿಖಾ ಕಾಲದಲ್ಲಿ ಮೃತಳ ಮುಖ, ಎದೆ ಮತ್ತು ಕೈ ಕಾಲುಗಳ ಮೇಲೆ ಕಚ್ಚಿದ ಗುರುತು ಕಂಡು ಬಂತೇ ಎಂದರೆ ಸಾಕ್ಷಿ ಆಕೆಯ ಬಲಗಾಲಿನ ಹಿಂಭಾಗದಲ್ಲಿ ಸಣ್ಣ ಸಣ್ಣ ಗುರುತುಗಳು ಕಂಡು ಬಂದವು ಆದರೆ ಅದು ಕಚ್ಚಿದ ಗುರುತು ಎಂದು ನನಗೆ ಆಗ ಗೊತ್ತಾಗಲಿಲ್ಲ ನಂತರದಲ್ಲಿ ವೈದ್ಯರು

ಮರಣೋತ್ತರ ಪರೀಕ್ಷಾ ವರದಿಯಲ್ಲಿ ಕಚ್ಚಿದ ಗಾಯವೆಂದು ತಿಳಿಸಿದ್ದಾರೆ ಎನ್ನುತ್ತಾರೆ. ಆ ರೀತಿ ನೀವು ಹೇಳಿದಂತೆ ಸಣ್ಣ ಸಣ್ಣ ಗುರುತುಗಳು ಕಂಡು ಬಂದ ಬಗ್ಗೆ ನಿಪಿ.8 ಶವ ತನಿಖಾ ವರದಿಯಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಗುರುತುಗಳ impression ಅನ್ನು ವೈಧ್ಯರಿಂದ ಸಂಗ್ರಹಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿ ನನಗೆ ಮೊದಲಿಗೆ ಅವು ಯಾವ ರೀತಿ ಗುರುತುಗಳು ಎಂದು ತಿಳಿದು ಬಂದಿಲ್ಲ ಎನ್ನುತ್ತಾರೆ. ನೀವು ಹೇಳಿದಂತೆ ಯಾವುದೇ ಗುರುತುಗಳು ಅಥವಾ ಕಚ್ಚಿದ ಗುರುತುಗಳು ಮೃತಳ ಮೈಮೇಲೆ ಕಂಡು ಬರದ ಕಾರಣ ನೀವು ಅವುಗಳನ್ನು ನಮೂದು ಮಾಡಿಲ್ಲ ಮತ್ತು ಅವುಗಳ impression ಅನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

41. ಶವತನಿಖಾ ಕಾಲದಲ್ಲಿ ಚಾಸಾ.36 ರವರು ನನ್ನ ಮೊಬೈಲ್ ನಲ್ಲಿ ಫೋಟೋಗಳನ್ನು ತೆಗೆದಿದ್ದಾರೆ. ಮೊಬೈಲ್ ನಲ್ಲಿ ಫೋಟೋಗಳನ್ನು ತೆಗೆದರೆ ಅವುಗಳ ಮೇಲೆ ಅವುಗಳನ್ನು ತೆಗೆದ ದಿನಾಂಕ, ಸಮಯ ಮತ್ತು ಮೊಬೈಲ್ ನ ಕಂಪೆನಿಯ ಹೆಸರು ನಮೂದಾಗುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ಸೆಟ್ಟಿಂಗ್ ಮಾಡಿದ್ದರೆ ಬರುತ್ತದೆ ಇಲ್ಲದಿದ್ದರೇ ಬರುವುದಿಲ್ಲ ಎನ್ನುತ್ತಾರೆ. ಆ ರೀತಿ ಸೆಟ್ಟಿಂಗ್ ಮಾಡಿಕೊಂಡು ಫೋಟೋಗಳನ್ನು ತೆಗೆಸಲು ನಿಮಗೆ ತೊಂದರೆ ಇತ್ತೇ ಎಂದರೆ ಸಾಕ್ಷಿ ಮೊದಲಿನಿಂದ ನಾನು ನನ್ನ ಮೊಬೈಲ್ ನಲ್ಲಿ ಆ ರೀತಿ ಯಾವುದೇ ಸೆಟ್ಟಿಂಗ್ ಮಾಡಿಲ್ಲ ಎನ್ನುತ್ತಾರೆ.

42. ಫ್ರಾಸಾ.1 ರವರು ದೂರನ್ನು ದಾಖಲಿಸುವ ಪೂರ್ವದಲ್ಲಿಯೇ ನೀವು ಈ ಪ್ರಕರಣದ ತನಿಖೆಯನ್ನು ಕೈಗೊಂಡಿದ್ದೀರಿ ಎಂದರೆ ಸರಿಯಲ್ಲ. ತದನಂತರ ನೀವು ಪ್ರಕರಣಕ್ಕೆ ಅನುಕೂಲವಾಗುವಂತೆ ಫ್ರಾಸಾ.1 ರವರಿಂದ ದೂರನ್ನು ಪಡೆದುಕೊಂಡ ಬಗ್ಗೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಸದರಿ ತಪ್ಪನ್ನು ಸರಿಪಡಿಸುವ ಸಲುವಾಗಿ ತನಿಖಾ ಕಾಲದಲ್ಲಿ ತೆಗೆಯಲಾಗಿದೆ ಎಂದು ಹೇಳಲಾದ ಯಾವುದೇ ಫೋಟೋಗಳ ಮೇಲೆ ಅವುಗಳನ್ನು ತೆಗೆದ ದಿನಾಂಕ, ಸಮಯ ಮತ್ತು ಸಾಧನದ ಕಂಪೆನಿಯ ಹೆಸರು ಬರದಂತೆ ಸೆಟ್ಟಿಂಗ್ ಮಾಡಲಾಗಿದೆ ಎಂದರೆ ಸರಿಯಲ್ಲ.

43. ನೀವು ಮೊದಲ ಬಾರಿಗೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದೀರಿ ಎಂದು ಹೇಳಲಾದ ಸಮಯಕ್ಕೆ ಮು.ಮಾ.1 ಕೋಲು ಮತ್ತು ರಕ್ತಸಿಕ್ತ ಬಟ್ಟೆಗಳು ಸ್ಥಳದಲ್ಲಿ ಕಂಡು ಬಂದಿಲ್ಲವೇ ಎಂದರೆ ಸಾಕ್ಷಿ ರಕ್ತವಾಗಿದ್ದ ಬಟ್ಟೆಗಳನ್ನು ಆರೋಪಿ ಬೇರೆ ಕಡೆ ಎತ್ತಿಟ್ಟಿದ್ದನು ನಂತರ ಅವುಗಳನ್ನು ಆತ ಹಾಜರುಪಡಿಸಿದ್ದಾನೆ ಎನ್ನುತ್ತಾರೆ. ನೀವು ಹೇಳಿದಂತೆ ಆರೋಪಿ ಯಾವುದೇ ಬಟ್ಟೆಗಳನ್ನು ಎತ್ತಿಟ್ಟಿರಲಿಲ್ಲ ಮತ್ತು ಅವುಗಳನ್ನು ನಿಮಗೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

44. ಸಾಮಾನ್ಯವಾಗಿ ಸ್ಥಳಕ್ಕೆ ಭೇಟಿ ನೀಡಿದಾಗ ನೀವು ಸ್ಥಳವನ್ನು ಸಂಪೂರ್ಣವಾಗಿ ಅಜಮಾಯಿಸಿ ನೋಡಬೇಕಾಗುತ್ತದೆ ಎಂದರೆ ಸರಿ. ಆರೋಪಿಯನ್ನು ಸ್ವಇಚ್ಛಾ

ಹೇಳಿಕೆಯನ್ನು ದಾಖಲಿಸುವ ಸಮಯದಲ್ಲಿ ಪ್ರಾಸಾ.2 ಮತ್ತು ಚಾಸಾ.3 ರವರು ಹಾಜರಿದ್ದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ.30 ರಂತೆ ಆರೋಪಿ ನಿಮಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ, ಸದರಿ ಹೇಳಿಕೆಯನ್ನು ನೀವು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

45. ಮು.ಮಾ.1 ಅನ್ನು ವಶಪಡಿಸಿಕೊಂಡಿದ್ದೀರಿ ಎಂದು ಹೇಳಿದ್ದೀರಿ ಆ ಸಮಯದಲ್ಲಿ ಎಫ್ ಎಸ್ ಎಲ್ ತಜ್ಞರನ್ನು ಕರೆಯಿಸಿ ಅದರ ಮೇಲೆ ಯಾರದ್ದಾದ್ದಾರೂ ಬೆರಳಿನ ಗುರುತು ಇದ್ದ ಬಗ್ಗೆ ಪರಿಶೀಲಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿ ಅದು ಹೊರಟಾದ ಮೇಲ್ಮೈಯನ್ನು ಹೊಂದಿದ್ದರಿಂದ ಕರೆಸಿಲ್ಲ ಎನ್ನುತ್ತಾರೆ. ಅದನ್ನು ಎಫ್ ಎಸ್ ಎಲ್ ಗೆ ಕಳುಹಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿ ಅದರ ಮೇಲೆ ಯಾವುದೇ ರಕ್ತದ ಕಲೆಗಳು ಕಂಡು ಬಂದಿಲ್ಲದ ಕಾರಣ ಕಳುಹಿಸಿಲ್ಲ ಎನ್ನುತ್ತಾರೆ. ಮು.ಮಾ.1 ಕೋಲನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ನೀವು ತಂದು ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ.

46. ನಿಪಿ.14 ಫೋಟೋದಲ್ಲಿ ಕೋಲು ನಿಮ್ಮ ಕೈಯ್ಯಲ್ಲಿರುವುದು ಕಂಡು ಬರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿದು ನಿಪಿ.13 ಫೋಟೋದಲ್ಲಿ ಆರೋಪಿ ಕೋಲನ್ನು ಇಟ್ಟ ಸ್ಥಳ ಕಂಡು ಬರುವುದಾಗಿ ನುಡಿದಿರುತ್ತಾರೆ. ನಿಪಿ.13 ಫೋಟೋದಲ್ಲಿ ನೀವು ಹೇಳಿದಂತೆ ಯಾವುದೇ ಕೋಲು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.13

ಮತ್ತು ನಿಪಿ.14 ಫೋಟೋಗಳಲ್ಲಿ ಕಂಡು ಬರುವ ದೊಣ್ಣೆ ಮು.ಮಾ.1 ಎಂದು ಗುರುತಿಸಲ್ಪಟ್ಟಿರುವ ದೊಣ್ಣೆ ಅಲ್ಲ ಎಂದರೆ ಸರಿಯಲ್ಲ. ನಿಪಿ.12 ರಿಂದ ನಿಪಿ.20 ಫೋಟೋಗಳನ್ನು ನಿಮ್ಮ ಸೂಚನೆಯಂತೆ ಆರೋಪಿಯನ್ನು ನಿಲ್ಲಿಸಿ ತೆಗೆಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

47. ಶವ ತನಿಖಾ ಕಾಲದಲ್ಲಿ ನಿಮಗೆ ಟೇಬಲ್ ಕಂಡು ಬಂದಿಲ್ಲವೇ ಎಂದರೆ ಸಾಕ್ಷಿ ಕಂಡು ಬಂದಿತ್ತು ಎನ್ನುತ್ತಾರೆ. ಕೊಠಡಿಯಲ್ಲಿ ಹಗ್ಗದ ಮೇಲೆ ಬಟ್ಟೆಗಳನ್ನು ಹಾಕಿದ್ದಾಗಿ ಹೇಳಿದ್ದೀರಿ ಅದು ನೀವು ಮೊದಲ ಬಾರಿಗೆ ಸ್ಥಳಕ್ಕೆ ಭೇಟಿ ನೀಡಿದಾಗ ಕಂಡು ಬಂದಿಲ್ಲವೇ ಎಂದರೆ ಸಾಕ್ಷಿ ಕಂಡು ಬಂದಿತ್ತು ಎನ್ನುತ್ತಾರೆ. ಆ ಸಮಯದಲ್ಲಿ ಸದರಿ ಬಟ್ಟೆಗಳನ್ನು ನೀವು ತೆಗೆದು ಪರಿಶೀಲಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿ ಹಗ್ಗದ ಮೇಲೆ ಹಲವಾರು ಬಟ್ಟೆಗಳು ಇದ್ದವು ಅವುಗಳ ಪೈಕಿ ಕೃತ್ಯಕ್ಕೆ ಸಂಬಂಧಿಸಿದ ಫೋಟೋಗಳನ್ನು ಆರೋಪಿ ತೆಗೆದು ಹಾಜರುಪಡಿಸಿದ್ದಾನೆ ಎನ್ನುತ್ತಾರೆ. ನೀವು ಹೇಳಿದಂತೆ ಆರೋಪಿ ಯಾವುದೇ ಬಟ್ಟೆಗಳನ್ನು ತೆಗೆದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಮ್ಮ ಸೂಚನೆಯ ಮೇರೆಗೆ ಆರೋಪಿಯನ್ನು ನಿಲ್ಲಿಸಿ ಕೇವಲ ಫೋಟೋಗಳನ್ನು ತೆಗೆದುಕೊಂಡಿದ್ದೀರಿ ಎಂದರೆ ಸರಿಯಲ್ಲ.

48. ನೀವು ಹೇಳಿದಂತೆ ಆರೋಪಿ ನಿಮಗೆ ಯಾವುದೇ ಮುದ್ದೆ ಮಾಲುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಅನುಮತಿಯನ್ನು ಪಡೆದುಕೊಂಡ

ಬಳಿಕ ಸುಮಾರು 15-20 ದಿನ ತಡವಾಗಿ ನೀವು ವಶಪಡಿಸಿಕೊಂಡಿದ್ದೀರಿ ಎಂದು ಹೇಳಲಾದ ವಸ್ತುಗಳನ್ನು ಎಫ್ ಎಸ್ ಎಲ್ ಗೆ ಕಳುಹಿಸಿಕೊಟ್ಟಿದ್ದೀರಿ ಆ ರೀತಿ ತಡವಾಗಲು ಕಾರಣವೇನೆಂದು ನೀವು ನಿಮ್ಮ ವರದಿಯಲ್ಲಿ ನಮೂದು ಮಾಡಿಲ್ಲ ಎಂದರೆ ಸಾಕ್ಷಿ ವೈದ್ಯರಿಂದ ಕೆಲವು ವಸ್ತುಗಳನ್ನು ಪಡೆಯುವುದು ಬಾಕಿ ಇದ್ದ ಕಾರಣ ಎಲ್ಲವನ್ನೂ ಒಟ್ಟಿಗೆ ಎಫ್ ಎಸ್ ಎಲ್ ಗೆ ಕಳುಹಿಸಿಕೊಟ್ಟಿದ್ದೇನೆ ಎನ್ನುತ್ತಾರೆ.

49. ನೀವು ನಿಮ್ಮ ಪ್ರಭಾವವನ್ನು ಬೀರಿ ಫ್ರಾಸಾ.5 ರವರಿಂದ ನಿಪಿ.24 ಮತ್ತು ನಿಪಿ.26 ರಂತೆ ಸುಳ್ಳು ವರದಿಗಳನ್ನು ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ. ಅದೇ ರೀತಿ ನೀವು ನಿಮ್ಮ ಪ್ರಭಾವವನ್ನು ಬೀರಿ ಫ್ರಾಸಾ.6 ಮತ್ತು ಫ್ರಾಸಾ.7 ರವರಿಂದ ನಿಪಿ.27, ನಿಪಿ.40 ಮತ್ತು ನಿಪಿ.28 ರಂತೆ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ವರದಿಗಳನ್ನು ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ.

50. ಫ್ರಾಸಾ.3 ರವರಿಗೆ ಬಾಯಿಪಾಠ ಮಾಡಿಸಿ ಅದೇ ರೀತಿ ಹೇಳಬೇಕು ಎಂದು ಹೇಳಿ ಆತನಿಂದ ನಿಪಿ.22 ರಂತೆ ಸುಳ್ಳು ಹೇಳಿಕೆಯನ್ನು ದಾಖಲು ಮಾಡಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನೀವು ನಿಮ್ಮ ಪ್ರಭಾವವನ್ನು ಬೀರಿ ಚಾಸಾ.36 ಮತ್ತು ಚಾಸಾ.31 ರವರಿಂದ ನಿಪಿ.45 ಮತ್ತು ನಿಪಿ.38, ನಿಪಿ.51 ರಂತೆ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ದೃಢೀಕರಣ ಪತ್ರ ಮತ್ತು ವರದಿಗಳನ್ನು ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ.

51. ನೀವು ಹೇಳಿದಂತೆ ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ದಿ.17.11.2022 ರಂದು ಆರೋಪಿಯನ್ನು ಸ್ವಇಚ್ಛಾ ಹೇಳಿಕೆಯ ಮೇರೆಗೆ ಪಂಚನಾಮೆಯನ್ನು ಕೈಗೊಳ್ಳಲು ಫ್ರಾಸಾ.2 ಮತ್ತು ಚಾಸಾ.3 ರವರಿಗೆ ನಿಪಿ.9 ರಂತೆ ನೋಟೀಸನ್ನು ಜಾರಿ ಮಾಡಿ ಠಾಣೆಗೆ ಬರಮಾಡಿಕೊಂಡಿರುತ್ತೇನೆ, ಪಂಚರಿಗೆ ಆರೋಪಿಯನ್ನು ಪರಿಚಯಿಸಿ ಪ್ರಕರಣದ ಸಾರಾಂಶವನ್ನು ತಿಳಿಸಿ ಪಂಚನಾಮೆಗೆ ಸಹಕರಿಸುವಂತೆ ಕೇಳಿಕೊಂಡ ಮೇರೆಗೆ ಅವರು ಅದಕ್ಕೆ ಒಪ್ಪಿರುತ್ತಾರೆ, ನಂತರ ಆರೋಪಿತರನ್ನು ಮತ್ತು ಪಂಚರವನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂಡು ಹೊರಟಿರುತ್ತೇನೆ, ಆರೋಪಿ ನನ್ನನ್ನು ಮತ್ತು ಪಂಚರನ್ನು ಹೊನ್ನಗುಂಡಿಯಲ್ಲಿ ತಾನು, ಫ್ರಾಸಾ.3 ಮತ್ತು ಮೃತಳು ವಾಸವಿದ್ದ ಮನೆಗೆ ಕರೆದುಕೊಂಡು ಹೋಗಿ ದಿ.15.11.2022 ರಂದು ರಾತ್ರಿ ತನ್ನ ಹೆಂಡತಿಗೆ ಕೋಲಿನಿಂದ ಹೊಡೆದು ನಂತರ ಕತ್ತು ಹಿಸುಕಿ, ಬಾಯಿಯನ್ನು ಮುಚ್ಚಿ ಉಸಿರುಗಟ್ಟಿಸಿ ಆಕೆಯನ್ನು ಕೊಲೆ ಮಾಡಿದ ಸ್ಥಳ ಅದೇ ಎಂದು ತಿಳಿಸಿ ತೋರಿಸಿರುತ್ತಾನೆ, ನಂತರ ಆರೋಪಿಯು ತಾನು ತನ್ನ ಹೆಂಡತಿಗೆ ಹೊಡೆದ ಕೋಲನ್ನು ತೋರಿಸುವುದಾಗಿ ಹೇಳಿ ನಮ್ಮನ್ನು ತನ್ನ ಮನೆಯ ಹಿಂಭಾಗದಲ್ಲಿದ್ದ ಕೊಟ್ಟಿಗೆಗೆ ಕರೆದುಕೊಂಡು ಹೋಗಿ ಅಲ್ಲಿ ಕಟ್ಟಿ ಹಾಕಲಾಗಿದ್ದ ಒಂದು ನಾಯಿಯ ಪಕ್ಕದಲ್ಲಿದ್ದ ಒಂದು ಕೋಲನ್ನು ತೆಗೆದು ಹಾಜರುಪಡಿಸಿ ಅದೇ ಕೋಲಿನಿಂದ ತಾನು ತನ್ನ ಹೆಂಡತಿಗೆ ಹೊಡೆದು ನಂತರ ಅದನ್ನು ಅಲ್ಲಿ

ಇಟ್ಟಿದ್ದಾಗಿ ತಿಳಿಸಿರುತ್ತಾನೆ, ಸದರಿ ಕೋಲು ಒಂದು ನೆಕ್ಕಿಗಿಡದ ಕೋಲಾಗಿದ್ದು ಸುಮಾರು 38 ಇಂಚು ಉದ್ದ ಇರುವುದು ಕಂಡು ಬಂತು, ಸದರಿ ಕೋಲನ್ನು ಪಂಚರ ಸಮಕ್ಷಮ ಬಿಳಿಯ ಬಟ್ಟೆಯಿಂದ ಪ್ಯಾಕ್ ಮಾಡಿ P ಎಂಬ ಅಕ್ಷರದಿಂದ ಸೀಲು ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

52. ಆರೋಪಿಯು ತನ್ನ ಮನೆಯ ಮೊದಲನೇ ಕೊಠಡಿಯಲ್ಲಿದ್ದ ಮರದ ಟೇಬಲ್ ನ ಕೆಳಗೆ ಯಾರಿಗೂ ಕಾಣದಂತೆ ಇಟ್ಟಿದ್ದ ಬಟ್ಟೆಯನ್ನು ತೆಗೆದು ಹಾಜರುಪಡಿಸಿ ತಾನು ತನ್ನ ಮುಖಕ್ಕೆ ಹೊಡೆದು ಆಕೆಯ ಮೂಗಿಗೆ ಕೈಯಿಂದ ಗುದ್ದಿದಾಗ ರಕ್ತ ಬಂದಿದ್ದು , ಆಗ ತಾನು ಸದರಿ ಬಟ್ಟೆಯಿಂದ ರಕ್ತವನ್ನು ಒರೆಸಿದ್ದಾಗಿ ತಿಳಿಸಿದ್ದಾನೆ, ಸದರಿ ಬಟ್ಟೆಯನ್ನು ಪಂಚರ ಸಮಕ್ಷಮ ಬಿಳಿಯ ಬಟ್ಟೆಯಿಂದ ಪ್ಯಾಕ್ ಮಾಡಿ P ಎಂಬ ಅಕ್ಷರದಿಂದ ಸೀಲು ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

53. ಆರೋಪಿ ಸದರಿ ಕೊಠಡಿಯಲ್ಲಿ ಹಗ್ಗದ ಮೇಲೆ ಹಾಕಿದ್ದ ಬಟ್ಟೆಗಳ ಪೈಕಿ ಒಂದು ಜೀನ್ಸ್ ಪ್ಯಾಂಟ್ ಮತ್ತು ಶರ್ಟ್‌ನ್ನು ತೆಗೆದು ಹಾಜರುಪಡಿಸಿ ಅವುಗಳನ್ನು ತಾನು ಕೃತ್ಯವೆಸಗಿದ ಸಮಯದಲ್ಲಿ ಧರಿಸಿದ್ದಾಗಿ ತಿಳಿಸಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

54. ಆರೋಪಿ ಅದೇ ರೂಮಿನಲ್ಲಿ ಸ್ಥಳವನ್ನು ತೋರಿಸಿ ಅಲ್ಲಿ ನೆಲದ ಮೇಲೆ ಚಾಪೆಯನ್ನು ಹಾಸಿ ತನ್ನ ಹೆಂಡತಿ

ಮಗನೊಂದಿಗೆ ಮಲಗಿದ್ದ ಸಮಯದಲ್ಲಿ ತಾನು ಆಕೆಯ ಮೂಗು ಮತ್ತು ಬಾಯಿಯನ್ನು ಮುಚ್ಚಿ ಕುತ್ತಿಗೆಯನ್ನು ಹಿಸುಕಿ, ಉಸಿರುಕಟ್ಟಿಸಿ ಕೊಲೆ ಮಾಡಿದ ಸ್ಥಳ ಅದೇ ಎಂದು ತಿಳಿಸಿರುತ್ತಾನೆ, ನಂತರ ಆರೋಪಿ ಮರದ ಟೇಬಲ್ ಮೇಲಿದ್ದ ಬೆಡ್ ಶೀಟನ್ನು ತೋರಿಸಿ ತನ್ನ ಹೆಂಡತಿ ಮಲಗಿದ್ದ ಬೆಡ್ ಶೀಟ್ ಅದೇ ಎಂದು ಹಾಜರುಪಡಿಸಿ ಅದಕ್ಕೆ ರಕ್ತದ ಕಲೆಯಾಗಿದ್ದರಿಂದ ಅದನ್ನು ಮಡಚಿ ಟೇಬಲ್ ಮೇಲೆ ಇಟ್ಟಿದ್ದಾಗಿ ತಿಳಿಸಿರುತ್ತಾನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

55. ಚಾಪೆಯ ಮೇಲೆ ಮೂರು ರಗ್ಗುಗಳು ಇರುವುದು ಕಂಡು ಬಂತು, ಮುಂದಿನ ತನಿಖೆಗಾಗಿ ಸದರಿ ರಗ್ಗುಗಳ ಒಂದೊಂದು ಭಾಗವನ್ನು ಕತ್ತರಿಸಿ ಪಂಚರ ಸಮಕ್ಷಮ ಬಿಳಿಯ ಬಟ್ಟೆಯಿಂದ ಪ್ರತ್ಯೇಕವಾಗಿ ಪ್ಯಾಕ್ ಮಾಡಿ P ಎಂಬ ಅಕ್ಷರದಿಂದ ಸೀಲು ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ಬಗ್ಗೆ ಸ್ಥಳದಲ್ಲಿ ಮೇಲೆ ಹೇಳಿದ ಪಂಚರ ಸಮಕ್ಷಮ ಬೆಳಿಗ್ಗೆ 10.00 ರಿಂದ 11.30 ಗಂಟೆಯವರೆಗೆ ನಿಪಿ.10 ರಂತೆ ಪಂಚನಾಮೆಯನ್ನು ಜರುಗಿಸಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

56. ತನಿಖೆಯಲ್ಲಿ ಆರೋಪಿಯ ವಿರುದ್ದ ಯಾವುದೇ ಸಾಕ್ಷಧಾರಗಳು ಕಂಡುಬರದೇ ಇದ್ದರೂ ಸಹ ಆತನ ವಿರುದ್ದ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಹಾಜರುಪಡಿಸಿರುವ ಮುದ್ದೆ ಮಾಲುಗಳಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ಆತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

57. ಮೃತಳ ಸಾವಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಯಾವ ಕಾರಣಕ್ಕೆ ಫ್ರಾಸಾ.3 ರವರ ಹೇಳಿಕೆಯನ್ನು ಸಿ ಆರ್ ಪಿ ಸಿ ಕಲಂ 164 ರಡಿಯಲ್ಲಿ ದಾಖಲಿಸಿಕೊಳ್ಳಲು ವಿಳಂಬವಾಗಿದೆ ಎಂದರೆ ಸಾಕ್ಷಿ ನಾನು ಆತನ ಹೇಳಿಕೆಯನ್ನು ಕಲಂ 161 ರಡಿಯಲ್ಲಿ ದಿನಾಂಕ 17.11.2022 ರಂದು ಪಡೆದುಕೊಂಡಿದ್ದೇನೆ ಆದರೆ ಆತ ದುಃಖದಲ್ಲಿದ್ದ ಕಾರಣ ಮತ್ತು ಆತನ ಭವಿಷ್ಯ ಏನು ಎಂಬ ಬಗ್ಗೆ ದ್ವಂದ್ವದಲ್ಲಿದ್ದ ಕಾರಣ ಆತನ ಸಂಬಂಧಿಕರು ಆತನನ್ನು ವಾಲ್ಮೀಕಿ ಆಶ್ರಮ ಶಾಲೆಗೆ ಸೇರಿಸಿದ ಬಳಿಕ ಆತನ ಮಾನಸಿಕ ಸ್ಥಿತಿಯನ್ನು ಖಾತ್ರಿಪಡಿಸಿಕೊಂಡು ಆತನ ಹೇಳಿಕೆಯನ್ನು ದಾಖಲಿಸಿಕೊಳ್ಳಲು ವಿಳಂಬವಾಗಿದೆ ಎನ್ನುತ್ತಾರೆ. ಆ ಬಗ್ಗೆ ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

58. ನೀವು ಹೇಳಿದಂತೆ ಯಾವುದೇ ಸಾಕ್ಷಿದಾರರು ನಿಮಗೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಹೇಳಿಕೆಗಳನ್ನು ನೀವು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿಕೊಂಡಿದ್ದೀರಿ ಎಂದರೆ

ಸರಿಯಲ್ಲ.  ನಿಪಿ.46 ಮತ್ತು ನಿಪಿ.47 ಸಿಡಿಗಳಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

59. ನಿಪಿ.39 ರಲ್ಲಿ ಸದಾ ಮತ್ತು ಯಶೋಧಾ ಎಂದು ತೋರಿಸಿರುವ ವ್ಯಕ್ತಿಗಳ ಪದನಾಮ ಏನು ಎಂದರೆ ಸಾಕ್ಷಿ ಅವರು ಕೂಲಿಕಾರರು ಎನ್ನುತ್ತಾರೆ.  ನಿಪಿ.39 ರ ಕೊನೆಯ ಭಾಗದಲ್ಲಿ ಕ್ರಮ ಸಂಖ್ಯೆ 1 ಮತ್ತು 2 ರಲ್ಲಿ ಸದಾ ಮತ್ತು ಯಶೋಧಾ ಎಂಬ ಹೆಸರುಗಳನ್ನು ಸೇರಿಸಿ ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ. ಎಸ್ಟೇಟಿನವರಿಂದ ಕೂಲಿಕೆಲಸಗಾರರಿಗೆ ಸಂಬಳವನ್ನು ನೀಡುವ ಬಗ್ಗೆ ಅಕ್ವಿಟೆನ್ಸ್ ರಿಜಿಸ್ಟರಿನ ದಾಖಲೆಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.  ನಿಪಿ.39 ದಾಖಲೆ ಆರೋಪಿ ಮತ್ತು ಮೃತಳಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್